ಹದಗೆಟ್ಟಿತು. ಕಾಲು ನೋವು, ಹೊಟ್ಟೆನೋವು ಕಾಡಲಾರಂಭಿಸಿತು. ಎಷ್ಟೆಂದರೆ ಬಟ್ಟೆ ಹೊಲಿಯಲಾರದಷ್ಟು ಅವರ ಆರೋಗ್ಯ ಹದಗೆಟ್ಟಿತು. ಬಟ್ಟೆ ಹೊಲಿಯುವುದನ್ನು ಬಿಡದಿದ್ದರೆ ನಿಮ್ಮ ಆರೋಗ್ಯ ಸುಧಾರಿಸುವುದಿಲ್ಲ ಎಂದರು ವೈದ್ಯರು.

ನಿಜಕ್ಕೂ ಅವತ್ತು ಮಹಾದೇವಿಯ ಪಾಲಿಗೆ ಕರಾಳ ದಿನ. ಬಟ್ಟೆ ಹೊಲಿಯುವುದನ್ನು ಬಿಟ್ಟರೆ ಬೇರೇನೂ ಅವರಿಗೆ ಗೊತ್ತಿಲ್ಲ. ಅದುವೇ ಜೀವನಕ್ಕೆ ಆಧಾರವಾಗಿತ್ತು. ಗಂಡನ ಆರೋಗ್ಯ, ಇದ್ದೊಬ್ಬ ಮಗಳ ವಿದ್ಯಾಭ್ಯಾಸ, ಎಲ್ಲಕ್ಕಿಂತ ಮುಖ್ಯವಾಗಿ ಮೂವರ ಹೊಟ್ಟೆ ತುಂಬಿಸುವ ಜವಾಬ್ದಾರಿ ಇವೆಲ್ಲವೂ ಒಮ್ಮೆ ಮಹಾದೇವಿಯ ಕಣ್ಣ ಮುಂದೆ ಹಾದು ಹೋದವು. ಕಣ್ಣ ಮುಂದೆ ಕತ್ತಲೆಯ ಹಾದಿ ಬಿಟ್ಟರೆ ಬೇರೇನೂ ಕಾಣಲಿಲ್ಲ.

ಆಗಲೇ ಅವರ ಬದುಕಿಗೆ ಬೆಳಕು ತೋರಿಸಿದ್ದು ಸೌರ ಶಕ್ತಿ. ಬೈಲಹೊಂಗಲ ತಾಲೂಕಿನ ಸೆಲ್ಕೋ ಸಂಸ್ಥೆಯ ಬ್ರಾಂಚ್ ಮ್ಯಾನೇಜರ್ ಕೆ.ಎಸ್.ಪಾಟೀಲ್, ಮಹಾದೇವಿಯವರಿಗೆ ಸೌರಚಾಲಿತ ಹೊಲಿಗೆ ಯಂತ್ರವನ್ನು ಕೊಳ್ಳಲು ಸಲಹೆ ನೀಡಿದರು. ಆದರೆ ಆಗ ಅದರ ಬೆಲೆ 24 ಸಾವಿರ ರೂಪಾಯಿ. ಅಷ್ಟು ಹಣ ಕೊಡುವ ಶಕ್ತಿ ತನಗಿಲ್ಲ ಎಂದು ಸುಮ್ಮನಾದರು. ಆದರೆ ಪಾಟೀಲ್ ಪಟ್ಟು ಬಿಡಲಿಲ್ಲ. ಫೌಂಡೇಶನ್ ಕಡೆಯಿಂದ ಸ್ವಲ್ಪ ಧನಸಹಾಯ ಮಾಡಿದರು. ಮುಂದೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಸಾಲ ತಗೊಂಡು ಸೌರಚಾಲಿತ ಹೊಲಿಗೆ ಯಂತ್ರವನ್ನು ಕೊಂಡರು ಮಹಾದೇವಿ.

ಸೌರಶಕ್ತಿಗೆ ಇತಿ ಮಿತಿ ಇಲ್ಲ..






